ನೀಡಿದಂತಾಯಿತು. ಆತ ಹೇಳಿದರು, 'ನೀನು ನನ್ನ ಮುಂದೆ ನಿಂತು ಭಾಷಣ ಮಾಡುವಂತೆ ಆಗಿದ್ದೀ ಅಲ್ಲವೇ? ನಿಮಗೆಲ್ಲಾ ಅಷ್ಟರ ಮಟ್ಟಿಗೆ ನನ್ನ ಮೇಲೆ ಮರ್ಯಾದೆ ಇದೆ. ನನ್ನ ಜೀವನ ಪೂರಾ ದುಡಿದು ಕೈ ಕಾಲು ಸೊರಗಿದವನ ಮುಂದೆ ನಿಂತು ಭಾಷಣ ಬಿಗಿಯುವಂತೆ ಆಗಿದ್ದೀ ಅಂದುಕೊಳ್ಳಬೇಡ. ಅಷ್ಟು ಎತ್ತರಕ್ಕೇನೂ ಬೆಳೆದಿಲ್ಲ ನೀನು. ಅದನ್ನು ಅರ್ಥ ಮಾಡಿಕೋ.'

ರವಿ ಹೇಳಿದ, 'ಅಮ್ಮ ಮತ್ತೆ ಬಿಸಿಯಾಗಿ ಟೀ ಮಾಡಿ ತಂದು ಕೊಡುತ್ತಾಳೆ. ನಿಮಗೆ ಇಷ್ಟವಾದ ಬೇರೆ ಚುಟ್ಟವನ್ನು ನಾನು ತಂದು ಕೊಡುತ್ತೇನೆ. ಅದಕ್ಕೇಕೆ ಇಷ್ಟು ಕೋಪ ಮಾಡಿಕೊಳ್ಳುತ್ತೀರಿ ಅಪ್ಪ?'

ರವಿ ಹೊರಕ್ಕೆ ಹೋಗಲು ತಯಾರಾದಾಗ ಅಪ್ಪಾವ್ರು ಹೇಳಿದರು, 'ಎಲ್ಲಿಗೆ ಹೋಗುತ್ತಿದ್ದೀ? ನನಗೆ ನೀನು ಚುಟ್ಟವನ್ನೇನು ತರಬೇಡ. ಟೀನೂ ಬೇಡ, ನನ್ನ ಪಾಡಿಗೆ ನನ್ನನ್ನು ಇರಲು ಬಿಟ್ಟರೆ ಸಾಕು. ನನಗೆ ವಯಸ್ಸಾಗಿದೆ. ಕಷ್ಟ ಪಡಲಾರೆ. ಅಂತಹ ಒಬ್ಬ ತಂದೆ ನಾನೆಂದು ನಿಮಗೆ ಜ್ಞಾನ ಇದೆಯೇ? ಆ ಜ್ಞಾನ ಇದ್ದರೆ ನೀವೇ ತಿಳಿದುಕೊಂಡು ಚುಟ್ಟ ತಂದು ಕೊಡಬೇಕು. ನನ್ನನ್ನು ಗಮನಿಸುತ್ತಿರಬೇಕು. ಇಲ್ಲದಿದ್ದರೆ ನನಗೆ ನೆಮ್ಮದಿಯಿರುವುದಿಲ್ಲ. ಅಂತಹ ಸಮಯ ಬಂದರೆ ನೀವು ಯಾರೂ ನನ್ನನ್ನು ನೋಡಲಾರಿರಿ...' ಅಪ್ಪಾವ್ರ ಮಾತು ಗದ್ಗದಿತವಾಯಿತು.

'ಯಾಕಪ್ಪಾ ನೀವು ಹೀಗೆಲ್ಲಾ ಮಾತನಾಡುತ್ತೀರಿ. ನಾವೇನು ನಿಮಗೆದುರು ಮಾತನಾಡಲಿಲ್ಲವಲ್ಲಾ? ಒಂದು ವೇಳೆ ಮಾತನಾಡಿದ್ದರೆ ನೀವು ನಮ್ಮನ್ನು ಕ್ಷಮಿಸಬೇಕು ಅಲ್ಲವೇ?'

'ಕ್ಷಮಿಸುತ್ತಿರಬೇಕು, ಕ್ಷಮಿಸುತ್ತೇನೆ. ನಿಮ್ಮನ್ನು ಬೆಳೆಸಿದೆ. ಕುಡಿಯಲು ಗಂಜಿ, ಇರಲು ಮನೆ ನಿಮಗೆ ಇದೆ. ಇದಕ್ಕೆಲ್ಲಾ ನಾನು ಎಷ್ಟು ಕಷ್ಟಪಟ್ಟಿದ್ದೇನೆ ಗೊತ್ತೇ? ಇಷ್ಟೆಲ್ಲಾ ಮಾಡಿದ್ದರೂ ಈ ಮುದಿತನದಲ್ಲಿ ನನ್ನನ್ನು ಉಪವಾಸ ಹಾಕಿ ಕೊಲ್ಲಬೇಕೆಂದು ನೋಡುತ್ತಿದ್ದೀರಿ. ನಾನದನ್ನು ಅರ್ಥ ಮಾಡಿಕೊಂಡು ನಿಮ್ಮೊಂದಿಗೆ ಹೇಳಿದರೆ ನಾನು ಅದನ್ನೆಲ್ಲಾ ಕ್ಷಮಿಸಬೇಕು ಎಂದು ಹೇಳುತ್ತಿದ್ದೀರಿ ಅಲ್ಲವೇ?'

ರವಿ ಅಪ್ಪಾವ್ರ ಬಳಿ ಹೋಗಿ ತನ್ನನ್ನು ನಿಯಂತ್ರಿಸಿಕೊಂಡು ಕೇಳಿದ, 'ಅಪ್ಪ ನಿಮ್ಮಲ್ಲಿ ಆದ, ಆಗುತ್ತಿರುವ ಬದಲಾವಣೆಯನ್ನು ನಾನು ಗಮನಿಸುತ್ತಲೇ ಇದ್ದೇನೆ. ನಿಮ್ಮ ಮನಸ್ಸಿನಲ್ಲಿ ಏನಾಗುತ್ತಿದೆ? ನಾವೆಲ್ಲಾ ನಿಮ್ಮನ್ನು ಯಾವಾಗಲೂ ಇಷ್ಟಪಡುತ್ತಲೇ ಇದ್ದೇವೆ'.

ಅಪ್ಪ ಒಂದು ನಿಮಿಷ ಮಗನ ಮುಖವನ್ನು ನೋಡಿ ಶಾಂತವಾಗಿ ಹೇಳಿದರು. 'ಹಾಗಾದರೆ ಈ ಮುದುಕನನ್ನು ನೀವೆಲ್ಲಾ ಮರೆತೇ ಇಲ್ಲ. ಅಲ್ಲವೇ?' ಅಪ್ಪ ವ್ಯಂಗ್ಯವಾಗಿ ನಕ್ಕರು. 'ಲೇ ನಿನ್ನ ತಂತ್ರಗಳೇನೂ ನನ್ನ ಹತ್ತಿರ ಹೇಳಬೇಡ. ನೀವು ಮನಸ್ಸಿನಲ್ಲಿ ಅಂದುಕೊಳ್ಳುವುದು, ನೀವು ಮಾಡುತ್ತಿರುವುದು ಇವನ್ನೆಲ್ಲಾ ನಾನು ಸುಮ್ಮನೆ ನೋಡುತ್ತಿರುವೆನೆಂದಲ್ಲವೇ? ಖಂಡಿತ ಇಲ್ಲ ಕಣೋ. ನನ್ನ ನಾಲಿಗೆ ಉಡುಗಿ ಹೋಗುವವರೆಗೂ ನಿಮ್ಮ ಹದ್ದು ಮೀರಿದ ವರ್ತನೆಗಳನ್ನು ಸಹಿಸುವುದಿಲ್ಲ ಗೊತ್ತಾಯಿತೇ?'

ರವಿ ಹೇಳಿದ, 'ನಾವು ಏನು ತಂತ್ರ ಮಾಡುತ್ತಿದ್ದೇವೆ ಅಪ್ಪಾ? ನಿಮ್ಮ ಮನಸ್ಸಿನಲ್ಲೇನಿದೆ ಹೇಳಿ. ಬಹುಶಃ ನಿಮ್ಮ ಮನಸ್ಸಿನಲ್ಲಿ ಏನೇನೋ ತಪ್ಪು ಅಭಿಪ್ರಾಯಗಳಿವೆ'.

'ಹೌದು ಕಣೋ, ನಾನು ನಿಮ್ಮನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದೇನೆ. ನಾನು ಅರ್ಥಹೀನವಾಗಿ ಮಾತನಾಡುತ್ತಿದ್ದೇನೆ. ಇನ್ನು ಸ್ವಲ್ಪ ದಿನ ಕಳೆದರೆ ನೀವು ಈ ಮುದುಕನಿಗೆ ಹುಚ್ಚು ಎಂದು ಹೇಳಲೂ ಹೇಸುವುದಿಲ್ಲ.'

ರವಿ ಮಾತನಾಡಲಿಲ್ಲ. ತಾಯಿಯ ಸುಕ್ಕು ಗಟ್ಟಿದ ಕೆನ್ನೆಗಳ ಮೇಲೆ ನೀರು ಹರಿಯತೊಡಗಿತು. ತಮ್ಮ ಬಿಳಿಯ ಕುರುಚಲು ಗಡ್ಡವನ್ನು ನೇವರಿಸಿಕೊಳ್ಳುತ್ತಾ ಅಪ್ಪ ಮುಂದಕ್ಕೆ ಮಾತನಾಡ ತೊಡಗಿದರು. 'ನನ್ನನ್ನು ಒಬ್ಬ ಹುಚ್ಚನೆಂದೆಣಿಸಿದ್ದೀರಿ... ಅನಂತರ ಒಂದು ದಿನ ನನ್ನನ್ನು ಒಂದು ಹುಚ್ಚು ನಾಯಿಯಂತೆ ಕಲ್ಲೆಸೆದು ಓಡಿಸುತ್ತೀರಿ. ಊರ ಜನರು ಯಾರಾದರೂ ಕೇಳಿದರೆ ನನಗೆ ಹುಚ್ಚು ಎನ್ನುತ್ತೀರಿ. ನಿಮ್ಮ ತಂತ್ರ ನನಗೆ ಗೊತ್ತು.'